# ಕರ್ನಾಟಕ ಸರ್ಕಾರ

## ತಹಶೀಲ್ದಾರರು ಹೊಸಪೇಟೆ ಇವರ ನ್ಯಾಯಾಲಯದ ನಡವಳಿಗಳು

| ವಾದಿ | ಪ್ರತಿವಾದಿ |
|---|---|
| 1 ಟಿ. ಅಪ್ಪಿರೆಡ್ಡಿ ತಂದೆ ಟಿ.ಶಿವಾರೆಡ್ಡಿ<br>2 ಬಿ.ಜಗದೀಶ ತಂದೆ ಬಿ.ಅಂಜಿನಪ್ಪ | ಕಂದಾಯ ನಿರೀಕ್ಷಕರು<br>ಕಂಪ್ಲಿ |

**ಪೀಠಿಕೆ:-**

ಹೊಸಪೇಟೆ ತಾಲೂಕಿನ 2-ಮುದ್ದಾಪುರ ಗ್ರಾಮದ ಸರ್ವೆ ನಂ 46/2 ವಿಸ್ತೀರ್ಣ 4.65 ಎಕರೆ ಟಿ. ಅಪ್ಪಿರೆಡ್ಡಿ ತಂದೆ ಟಿ.ಶಿವಾರೆಡ್ಡಿ ಇವರು ತಮ್ಮ ಹಕ್ಕು ಸ್ವಾದೀನಾನಭವದಲ್ಲಿರುವ ಪ್ರಸ್ತಾಪಿತ ಜಮೀನನ್ನು ನೋಂದಣಿ ದಸ್ತವೇಜ ಸಂಖ್ಯೆ ಕೆಪಿಎಲ್-1-02704/2015-16 ದಿನಾಂಕ 17-03-2016 ರಲ್ಲಿ ಬಿ.ಜಗದೀಶ ತಂದೆ ಬಿ.ಅಂಜಿನಪ್ಪ ಇಂದಿರಾನಗರ, ಕೊಳಗಲ್ ರಸ್ತೆ, ಬಳ್ಳಾರಿ ಇವರಿಗೆ ಖಂಡಿತ ಕ್ರಯ ಮಾಡಿ ಕೊಟ್ಟಿದ್ದು ಸದರಿ ಕ್ರಯಪತ್ರವನ್ನು ನೊಂದಣಿ ಮಾಡಿಸಿರುತ್ತಾರೆ ಸದರಿ ನೊಂದಣಿ ಪತ್ರದ ಆಧಾರದ ಮೇಲೆ ಹಕ್ಕು ಬದಲಾವಣಿ ಸಂಖ್ಯೆ ಹೆಚ್ 24/2015-16 ರ ದಿನಾಂಕ 17-3-2016 ರಂದು ಚೆಕಲಿಸ್ಟ ಮತ್ತು ನಮೂನೆ 21 ತಯಾರಾಗಿದ್ದು ಲಗತ್ತು ದಸ್ತವೇಜ ವಿವರಗಳ ಹಕ್ಕು ಬದಲಾವಣಿ ವಿವರಗಳೊಂದಿಗೆ ಹಕ್ಕು ಬದಲಾವಣಿ ಪ್ರಕರಣವನ್ನು ಕಂದಾಯ ನಿರೀಕ್ಷಕರು ಕಂಪ್ಲಿ ಮುಂದಿನ ಕ್ರಮಕ್ಕಾಗಿ ಸಲ್ಲಿಸಲಾಗಿತ್ತು.

ಹಕ್ಕು ಬದಲಾವಣಿ ಆದೇಶದಲ್ಲಿ ನಮೂನೆ 21ರ ನೋಟಿಸಿಗೆ ಕ್ರಯದಾರರಿಗೆ ಜಾರಿಯಾಗಿಲ್ಲವೆಂದು ತಿಳಿಸಿರುತ್ತಾರೆ. ನಮೂನೆ-21 ರ ನೋಟೀಸಿಗೆ ಆಸಕ್ತರು ಸಹಿ ಮಾಡಿರುವುದಿಲ್ಲವೆಂಬ ಕಾರಣಕ್ಕೆ ಸದ್ರಿ ಹಕ್ಕು ಬದಲಾವಣೆಯನ್ನು ತಿರಸ್ಕರಿಸಿ ಕಂದಾಯ ನಿರೀಕ್ಷಕರು ಕಂಪ್ಲಿ ಇವರು ಮುಂದಿನ ವಿಚಾರಣೆಗೆ ತಹಶೀಲ್ದಾರರಿಗೆ ಸಲ್ಲಿಸಿರುತ್ತಾರೆ.

ಸದರಿ ಪ್ರಕರಣದಲ್ಲಿ ಸಂಬಂಧಿಸಿದವರಿಗೆ ನೋಟೀಸುಗಳನ್ನು ಜಾರಿಗೊಳಿಸಿ ಪ್ರಕರಣದಲ್ಲಿ ವಿಚಾರಣೆಯನ್ನು ದಿನಾಂಕ 09-06-2016 ರಂದು ಪ್ರಾರಂಬಿಸಿ ದಿನಾಂಕ 30-06-2016 ರಂದು ಅಂತಿಮಗೊಳಿಸಲಾಯಿತು. ಪ್ರಕರಣದಲ್ಲಿ ವಿಚಾರಣೆಗೆ ಕರೆಯಲಾಗಿ ವಾದಿಗಳು ವಿಚಾರಣೆಯಲ್ಲಿ ಹಾಜರಾಗಿರುತ್ತಾರೆ. ಮತ್ತು ಖರೀದಿದಾರರು ಮತ್ತು ಮಾರಾಟಗಾರರು ದಸ್ತವೇಜ ಸಂಖ್ಯೆ ಕೆಪಿಎಲ್-1 02704/2015-16 ದಿನಾಂಕ 17-03-2016 ಪ್ರಕಾರ ಹಕ್ಕುಬದಲಾವಣೆ ಮಾಡವಂತೆ ಹೇಳಿಕೆ ನೀಡಿರುತ್ತಾರೆ. ಕಾರಣ ಈ ಕೆಳಗಿನಂತೆ.

**ಸಂ/ಕಂ/ಪಹಣಿ/ವಿವಾದ/19/2016-17** **ದಿನಾಂಕ:-1-9-2016**

## ಆದೇಶ

ಪ್ರಕರಣದ ಹಿನ್ನಲೆ ವಾಸ್ತವಂಶ ಹಾಗೂ ದಾಖಲೆಗಳನ್ವಯ ಹೊಸಪೇಟೆ ತಾಲೂಕಿನ 2-ಮುದ್ದಾಪುರ ಗ್ರಾಮದ ಸರ್ವೆ ನಂ 46/2 ವಿಸ್ತೀರ್ಣ 4.65 ನೊಂದಾಯಿತ ದಸ್ತಾವೇಜು ಸಂಖ್ಯೆ ಕೆಪಿಎಲ್-1 02704/2015-16 ದಿನಾಂಕ 17-03-2016 ರನ್ವಯ ಕ್ರಯದಾರರಾದ ಶ್ರೀ ಬಿ.ಜಗದೀಶ ತಂದೆ ಬಿ.ಅಂಜಿನಪ್ಪ ಇವರ ಹೆಸರಿಗೆ ಹಕ್ಕು ಬದಲಾವಣಿ ಮಾಡಲು ಆದೇಶಿಸಿದೆ.

ಈ ಆದೇಶವನ್ನು ದಿನಾಂಕ: 1-9-2016 ರಂದು ತೆರೆದ ನ್ಯಾಯಾಲಯದಲ್ಲಿ ಉಕ್ತ ಲೇಖನ ನೀಡಿ ಬಹಿರಂಗವಾಗಿ ಘೋಷಿಸಲಾಯಿತು.

ತಹಶೀಲ್ದಾರರು, ಹೊಸಪೇಟೆ

ಗೆ,
ವಾದಿ ಮತ್ತು ಪ್ರತಿವಾದಿಗಳಿಗೆ
ಕಂದಾಯ ನಿರೀಕ್ಷಕರು, ಕಂಪ್ಲಿ ಮತ್ತು ಭೂಮಿ ಕೇಂದ್ರ